# ಇನ್ನೂ ದಯೆ ಬಾರದೆ ದಾಸನ ಮೇಲೆ

(Version – 2)

1. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 244.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 71.
3. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page No. 90.
4. **Note:** Lyrics given here are as per Ref. 3. As these are slightly different than Ref. 1 and Ref. 2, they are listed separately as Version – 2.
5. **Note:** Lyrics in Ref. 1 and Ref. 2 are totally different. Hence, listed separately. For lyrics as in Ref. 1 and Ref. 2, please refer "innu daye bArade dAsana mEle – Version 1" { "ಇನ್ನೂ ದಯೆ ಬಾರದೆ ದಾಸನ ಮೇಲೆ – Version 1" }

ರಾಗ: ಕಲ್ಯಾಣಿ ತಾಳ: ಅಟ

ಇನ್ನೂ ದಯ ಬಾರದೆ ದಾಸನ ಮೇಲೆ
ಇನ್ನೂ ದಯ ಬಾರದೆ ॥ ಪ ॥

ಮುನ್ನ ಮಾಡಿದ ದುಷ್ಕರ್ಮಗಳೆಲ್ಲವ
ಮನ್ನಿಸಿ ಕಳೆವುದು ಇಂದಿರೆಯ ರಮಣಾ ॥ ಅಪ ॥

ನಾನಾ ಜನ್ಮಗಳಲ್ಲಿ ನಾನಾ ಜಾತಿಗಳಲ್ಲಿ
ನಾನಾ ಯೋನಿಗಳಲ್ಲಿ ಜನಿಸಿ ಜನಿಸಿ ದೇವಾ
ನಾನು ನನ್ನದು ಎಂದು ನರಕದೊಳಗೆ ಬಿದ್ದು
ನೀನೇ ಗತಿಯೆಂದು ಸ್ಮರಣೆ ಮಾಡಿದ ಮೇಲೆ ॥ ೧ ॥

ಕಾಮಾದಿ ಷಡ್ವರ್ಗ ಗಾಢಾಂಧಕಾರದಿ
ಪಾಮರನಾಗಿ ಇದ್ದಂಥ ಪಾತಕನ
ರಾಮಾ ಮನೋಹರ ಹರಿ ನೀನೇ ಗತಿಯೆಂದು

ನಾಮಾಮೃತವನು ಪಾನ ಮಾಡಿದ ಮೇಲೆ ॥ ೨ ॥

ಏನ ಓದಿದರೇನು ಏನ ಕೇಳಿದರೇನು
ಈ ನಾಮ ಸ್ಮರಣೆಗೆ ಸರಿ ಬಾರದು
ಜ್ಞಾನ ಹೀನನ ಮೇಲೆ ದಯವಿಟ್ಟು ಪಾಲಿಸು
ದೀನ ದಾಯಕರ ಪುರಂದರ ವಿಠ್ಠಲನೆ ॥ ೩ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು**:

**ಅಳಿದು ಪುಟ್ಟಿ** – ಸತ್ತು, ಹುಟ್ಟಿ.

**ನಾನು ನನ್ನದು** – ಮೊದಲು ಮಿಥ್ಯಾಜ್ಞಾನ, ಅನಂತರ ಎರಡನೆಯ ಅಪರಾಧವಾದ ಹರಿಯ ವಿಸ್ಮರಣೆ, ಅದರಿಂದ ಸ್ವಾತಂತ್ರ್ಯಾಭಿಮಾನ ಒದಗಿ ಅಹಂಕಾರ ಮಮಕಾರಗಳ ತಲೆದೋರಿಕೊಳ್ಳುತ್ತವೆ. ಇದರಿಂದ ಮೂರನೆಯ ಅಪರಾಧವಾದ ನಿಷಿದ್ಧ ಆಚರಣೆ, ವಿಹಿತ ಅನಾಚರಣೆ ಇವು ನರಕಕ್ಕೆ ದಾರಿಯಾಗುತ್ತವೆ.

**ಕಾಮಾದಿ ಷಡ್ವರ್ಗ** – ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳೆಂಬ ಆರು. (ಅರಿ ಷಡ್ವರ್ಗಗಳು)

**ಪಾಮರ** – ಸರಿಯಾದ ತಿಳುವಳಿಕೆಯಿಲ್ಲದವನು.

**ಶ್ರೀ ಮನೋಹರ** – ಸಮುದ್ರ ಮಂಥನ ಕಾಲದಲ್ಲಿ ಸಮುದ್ರದಿಂದ ಹೊರಬಂದ ಲಕ್ಷ್ಮೀಯು ವರಿಸಿದುದು ನಾರಾಯಣನನ್ನೇ. ಅವಳ ಮನಸ್ಸನ್ನು ಅಪಹರಿಸಿದನಾಗಿ ಮನೋಹರ.

**ಚಿತ್ತಜ ಜನಕ** – ಮನ್ಮಥನ ತಂದೆ.

**ನಾಮ ಮುದ್ರಿಕೆಯಿಂದ** – ಹರಿದಾಸ ದೀಕ್ಷೆಯನ್ನು ಪಡೆದು.

**ಮಾನಸ ವಾಚ ಕಾಯದಿ** – ಮನಸ್ಸು ಮಾತು ಮೈಗಳಿಂದ ಮಾಡುವ ಕೆಲಸವೆಲ್ಲವೂ ಜೀವನಿಗೆ ಬಿಂಬರೂಪವಾಗಿರುವ ಪರಮಾತ್ಮನ ಅಧೀನವಾದುವೇ; ಬಿಂಬ ಕ್ರಿಯೆಯಿಂದಲೇ ಪ್ರತಿಬಿಂಬನಾದ ಜೀವನ ಕ್ರಿಯೆ.

**ಜಾತಿ** = ಬ್ರಾಹ್ಮಣ ಮೊದಲಾದ ವರ್ಣಗಳು

**ನಾನಾ ಯೋನಿಗಳಲ್ಲಿ** = ೮೪ ಲಕ್ಷ ಜೀವಗಳಲ್ಲಿ ಹುಟ್ಟಿ, ನಾನಾ ರೂಪಗಳನ್ನು ಪಡೆದ ನಂತರ

**ನಾಮಾಮೃತ ಪಾನ ಮಾಡು** = ನಾಮ ಸ್ಮರಣೆ ಮಾಡು

**Classification:** Keerthane
**Ankita:** purandara vittala
**Location:** NA
**Category:** Jeevana Sambodhane
**Sub-Category:** daya, Samudra, ranga, rajya, huttu, naraka, chitta, karma, prana, deva,
**Pravachana:** NA
**Explanation:** NA